

# ಶಂಕರಾಚಾರ್ಯರ ' ಹರಿಚರಣಾಷ್ಟಕಮ್ '



ಧ್ಯೇಯಂ ವದಂತಿ ಶಿವಮೇವ ಹಿ ಕೇಚಿದನ್ಯೇ
ಶಕ್ತಿಂ ಗಣೇಶಮಪರೇ ತು ದಿವಾಕರಂ ವೈ ।
ರೂಪೈಸ್ತು ತೈರಪಿ ವಿಭಾಸಿ ಯತಸ್ತ್ವಮೇವ
ತಸ್ಮಾತ್ತ್ವಮೇವ ಶರಣಂ ಮಮ ಶಂಖಪಾಣೇ ॥

ಕೆಲವರು ಧ್ಯಾನಿಸಲು ಶಿವನೇ ಯೋಗ್ಯನು ಎನ್ನುವರು. ಕೆಲವರು ಶಕ್ತಿ ಎನ್ನುವರು. ಕೆಲವರು ಗಣೇಶ ಎನ್ನುವರು. ಇನ್ನು ಕೆಲವರು ಸೂರ್ಯ ಎನ್ನುವರು. ಆದರೆ ಹೇ ಶಂಖಪಾಣಿ, ನೀನು ಆ ಎಲ್ಲ ರೂಪ ಗಳಲ್ಲಿಯೂ ಪ್ರಕಾಶಿಸುತ್ತಿರುವುದರಿಂದ ನೀನೇ ನನಗೆ ಶರಣು.

ನೀಚೋಽಪಿ ಪಾಪವಲಿತೋಽಪಿ ವಿನಿಂದಿತೋಽಪಿ
ಬ್ರೂಯಾತ್ತವಾಹಮಿತಿ ಯಸ್ತು ಕಿಲೈಕವಾರಮ್ ।
ತಂ ಯಚ್ಛಸೀಶ ನಿಜಲೋಕಮಿತಿ ವ್ರತಂ ತೇ
ತಸ್ಮಾತ್ತ್ವಮೇವ ಶರಣಂ ಮಮ ಶಂಖಪಾಣೇ ॥

ನೀಚನಾಗಿರಲಿ, ಪಾಪಿಯಾಗಿರಲಿ, ನಿಂದನೀಯನಾಗಿರಲಿ. ಅವನು ಒಂದೇ ಸಲ 'ನಾನು ನಿನ್ನವನು' ಎಂದರೆ ಸಾಕು, ನೀನು ಅವನಿಗೆ ನಿನ್ನ ಲೋಕದಲ್ಲಿ ಆಶ್ರಯವನ್ನು ಕೊಡುವೆ. ಅದು ನಿನ್ನ ವ್ರತವಾಗಿದೆ. ಆದಕಾರಣ ಹೇ ಶಂಖಪಾಣಿ, ನೀನೇ ನನಗೆ ಶರಣು.

ವೇದೇಷು ಧರ್ಮವಚನೇಷು ತಥಾಽಗಮೇಷು
ರಾಮಾಯಣೇಽಪಿ ಚ ಪುರಾಣಕದಂಬಕೇ ವಾ ।
ಸರ್ವತ್ರ ಸರ್ವವಿಧಿನಾ ಗದಿತಸ್ತ್ವಮೇವ
ತಸ್ಮಾತ್ತ್ವಮೇವ ಶರಣಂ ಮಮ ಶಂಖಪಾಣೇ ॥

ವೇದಗಳಲ್ಲಿ, ಧರ್ಮಶಾಸ್ತ್ರಗಳಲ್ಲಿ, ಆಗಮಗಳಲ್ಲಿ, ಶ್ರೀಮದ್ರಾಮಾಯಣ ದಲ್ಲಿ ಮತ್ತು ಪುರಾಣಗಳಲ್ಲಿ, ಎಲ್ಲ ಕಡೆಗಳಲ್ಲಿಯೂ, ಎಲ್ಲ ವಿಧ ಗಳಲ್ಲಿಯೂ ನಿನ್ನನ್ನೇ ಸಾರಿ ಹೇಳಲಾಗಿದೆ; ಆದಕಾರಣ ಹೇ ಶಂಖ ಪಾಣಿ, ನೀನೇ ನನಗೆ ಶರಣು.

# ಯುವಕರಿಗೆ ಸ್ವಾಮಿ ವಿವೇಕಾನಂದರ ಸಂದೇಶ

೧. ನನ್ನ ನಂಬಿಕೆಯೆಲ್ಲವೂ ಯುವಪೀಳಿಗೆಯ ಮೇಲೆ, ಆಧುನಿಕ ಜನಾಂಗದ ಮೇಲೆ ಇದೆ. ಅವರಿಂದಲೇ ನನ್ನ ಕೆಲಸಗಾರರು ಹೊರ ಹೊಮ್ಮುತ್ತಾರೆ. ಅವರು ಸಿಂಹಗಳ ಹಾಗೆ, ಇಡೀ ಸಮಸ್ಯೆಯ ಪರಿಹಾರ ಕಂಡುಕೊಳ್ಳಲು ಕಾರ್ಯತತ್ಪರರಾಗುತ್ತಾರೆ. ನಾನು ಒಂದು ಭಾವನೆಯನ್ನು ರೂಪಿಸಿದ್ದೇನೆ ಹಾಗೂ ನನ್ನ ಇಡೀ ಜೀವನವನ್ನು ಅದಕ್ಕಾಗಿ ಸಮರ್ಪಿಸಿದ್ದೇನೆ. (ನನ್ನ ಅನುಯಾಯಿಗಳು) ಒಂದು ಕೇಂದ್ರದಿಂದ ಇನ್ನೊಂದು ಕೇಂದ್ರಕ್ಕೆ – ಕಟ್ಟಕಡೆಯಲ್ಲಿ ನಾವು ಇಡೀ ಭಾರತವನ್ನು ತಲುಪುವ ತನಕ – ಈ ಭಾವನೆಯನ್ನು ಹರಡುತ್ತ ಸಂಚರಿಸುತ್ತಾರೆ.

೨. ನಾನು ಈ ಯುವಜನರನ್ನು ಸಂಘಟಿಸಲೆಂದೇ ಜನ್ಮವೆತ್ತಿದ್ದೇನೆ. ನೋಡುತ್ತಿರಿ, ಈಗ ಇರುವುದಕ್ಕಿಂತಲೂ ನೂರಾರು ಹೆಚ್ಚು ಯುವಕರು ಪ್ರತಿಯೊಂದು ನಗರದಲ್ಲಿಯೂ ನನ್ನನ್ನು ಸೇರಲು ಸಿದ್ಧರಾಗುತ್ತಾರೆ. ಅವರನ್ನೆಲ್ಲ ನಾನು, ತಡೆಯಲಾಗದ ಅಲೆಗಳಂತೆ ಭಾರತದೇಶದಾದ್ಯಂತ ಭೋರ್ಗರೆಯಲು ಕಳಿಸಲು ಇಚ್ಛಿಸುತ್ತೇನೆ. ಅವರೆಲ್ಲರೂ ಅತ್ಯಂತ ದಾರಿದ್ರ್ಯದಲ್ಲಿರುವವರ ಹಾಗೂ ಕೆಳಮಟ್ಟ ದಲ್ಲಿರುವವರ ಮನೆಗಳ ಬಾಗಿಲಿಗೇ ಸಾಂತ್ವನ, ನೀತಿ, ಧರ್ಮ ಮತ್ತು ಶಿಕ್ಷಣಗಳನ್ನು ತಲುಪಿಸುತ್ತಾರೆ.

೩. ಎಲ್ಲಕ್ಕಿಂತ ಮೊದಲಾಗಿ ನಮ್ಮ ಯುವಜನರು ಶಕ್ತಿಶಾಲಿಗಳಾಗಬೇಕು. ಧರ್ಮವು ಅನಂತರ ಬರುವುದು. ಓ ನನ್ನ ಯುವ ಸ್ನೇಹಿತರೇ, ಮೊದಲು ಬಲಶಾಲಿಗಳಾಗಿ. ನಿಮಗೆ ನಾನು ನೀಡುವ ಸಲಹೆಯೇ ಇದು. ಭಗವದ್ಗೀತೆಯನ್ನು ಓದುವುದಕ್ಕಿಂತ ಫುಟ್‌ಬಾಲ್ ಆಟ ದಿಂದ ನೀವು ಸ್ವರ್ಗಕ್ಕೆ ಹತ್ತಿರದವರಾಗುತ್ತೀರಿ. ಇದು ಕೆಚ್ಚೆದೆಯ ಮಾತುಗಳು; ಆದರೆ ನಾನು ಅವನ್ನು ಹೇಳಲೇಬೇಕಾಗಿದೆ. ಏಕೆಂದರೆ ನಾನು ನಿಮ್ಮನ್ನು ಪ್ರೀತಿಸುತ್ತೇನೆ. ಸಮಸ್ಯೆ ಎಲ್ಲಿದೆಯೆಂದು ನನಗೆ ಗೊತ್ತು. ನಾನು ಸ್ವಲ್ಪ ಅನುಭವವನ್ನೂ ಪಡೆದುಕೊಂಡಿದ್ದೇನೆ. ನಿಮ್ಮ ತೋಳುಗಳು ಹಾಗೂ ಮಾಂಸಖಂಡಗಳ ಬಲವನ್ನು ಸ್ವಲ್ಪ ಹೆಚ್ಚಿಸಿಕೊಳ್ಳುವುದರಿಂದ, ನೀವು ಭಗವದ್ಗೀತೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವಿರಿ.

೪. ಒಬ್ಬ ಇಂಗ್ಲಿಷ್ ಹುಡುಗ ನಿಮಗೆ ಹೇಳುವನು, "ನಾನೊಬ್ಬ ಇಂಗ್ಲಿಷರವನು, ನಾನು ಏನು ಬೇಕಾದರೂ ಮಾಡಬಲ್ಲೆ" ಎಂದು. ಅಮೆರಿಕದ ಹುಡುಗನೊಬ್ಬ ನಿಮಗೆ ಹೀಗೆಯೇ ಹೇಳುತ್ತಾನೆ. ಹಾಗೆಯೇ ಒಬ್ಬ ಯೂರೋಪಿನ ಹುಡುಗ ಕೂಡ. ನಮ್ಮ ಹುಡುಗರು ಹೀಗೆಯೇ ಹೇಳುತ್ತಾರೇನು? ಇಲ್ಲ, ಆ ಹುಡುಗರ ಅಪ್ಪಂದಿರೂ ಹಾಗೆ ಹೇಳಿಕೊಳ್ಳುವುದಿಲ್ಲ. ಏಕೆಂದರೆ ನಾವು ನಮ್ಮ ಮೇಲಿನ ಶ್ರದ್ಧೆಯನ್ನು ಕಳೆದುಕೊಂಡಿರುವೆವು.

೫. ಓ ನನ್ನ ವೀರಬಾಲಕರೇ, ನೀವೆಲ್ಲರೂ ಮಹತ್ಕಾರ್ಯಗಳನ್ನು ಮಾಡಲು ಹುಟ್ಟಿದ್ದೀರಿ ಎಂಬ ಶ್ರದ್ಧೆ ನಿಮ್ಮಲ್ಲಿರಲಿ. ಕುನ್ನಿಗಳ ಬೊಗಳುವಿಕೆಯು ನಿಮ್ಮನ್ನು ಭಯಪಡಿಸದೆಯೇ ಇರಲಿ – ಇಲ್ಲ, ಇಲ್ಲ, ಆಗಸದ ಮಿಂಚುಗುಡುಗುಗಳೂ ಸಹ. ಅದಕ್ಕೆ ಬದಲಾಗಿ ಎದ್ದುನಿಂತು, ಕೆಲಸಮಾಡಿ.

ನೀವು ಬದುಕುವುದು ಒಂದೇ ಸಲ. ಅದನ್ನು ಸರಿಯಾದ ರೀತಿಯಲ್ಲಿ ಬಾಳಿದರೆ ಸಾಕು. ಹೀಗಾಗಿ ಒಮ್ಮೆ ಬದುಕುವುದು ಬೇಕಾದಷ್ಟು.
– ಮೇ ವೆಸ್ಟ್ (Mae West)

ನನ್ನ ಜೀವನದಲ್ಲಿ ನಾನು ಏನನ್ನು ಕಲಿತಿದ್ದೇನೋ, ಅದೆಲ್ಲವನ್ನೂ ಮೂರು ಪದಗಳಲ್ಲಿ ಸಂಗ್ರಹಿಸುತ್ತೇನೆ: 'ಅದು ಸಾಗುತ್ತಲೇ ಇರುತ್ತದೆ.'
– ರಾಬರ್ಟ್ ಫ್ರಾಸ್ಟ್ (Robert Frost)

ನೀವು ನಿಮ್ಮ ಬೇರೆ ಬೇರೆ ಯೋಜನೆಗಳಲ್ಲಿ ಮಗ್ನರಾಗಿರುವಾಗ, ಯಾವುದು ಸರಿದುಕೊಂಡು ಹೋಗುತ್ತಿರುವುದೋ, ಅದನ್ನೇ 'ಜೀವನ' ಎನ್ನುವುದು. – ಅಲೆನ್ ಸೌಂಡರ್ಸ್ (Allen Saunders)

ಜೀವನವೆಂದರೆ ಬೈಸಿಕಲ್ ಸವಾರಿ ಮಾಡುವ ಹಾಗೆ. ನಿಮ್ಮ ಸಂಯಮವನ್ನು ಕಾಪಾಡಿಕೊಳ್ಳಲು ನೀವು ಸಾಗುತ್ತಲೇ ಇರಬೇಕು.
– ಆಲ್ಬರ್ಟ್ ಐನ್‌ಸ್ಟೈನ್ (Albert Einstein)

ಮರಣಭಯವು ಜೀವನಭಯವನ್ನು ಅನುಸರಿಸುತ್ತದೆ. ಸಂಪೂರ್ಣ ವಾಗಿ ಜೀವನವನ್ನು ನಡೆಸಿದವನು ಯಾವುದೇ ಸಮಯದಲ್ಲಿ ಸಾಯಲು ಸಿದ್ಧನಿರುತ್ತಾನೆ. – ಮಾರ್ಕ್ ಟ್ವೈನ್ (Mark Twain)

ಸಂಗತಿಗಳು ಮಾರ್ಪಡುತ್ತಲೇ ಇರುತ್ತವೆ; ಸ್ನೇಹಿತರು ದೂರ ವಾಗುತ್ತಲೇ ಇರುತ್ತಾರೆ. ಆದರೆ ಜೀವನವು ಯಾರ ಸಲುವಾಗಿಯೂ ನಿಲ್ಲುವುದಿಲ್ಲ. – ಸ್ಟೀಫನ್ ಚಬೋಸ್ಕಿ (Stephen Chbosky)